# ತಂತ್ರಜ್ಞಾನ ನಿಮ್ಮನ್ನು ಬೆಳೆಸಿದೆಯೆ?



ಚಿತ್ರ: ಕೇಶವ ವಿಟ್ಲ

**ಆಧುನಿಕ ತಂತ್ರಜ್ಞಾನವನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡರೆ ನಮ್ಮ ವ್ಯಕ್ತಿತ್ವದ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಬಹುದು.**

■ ಬೇಲೂರು ರಾಮಮೂರ್ತಿ

ಇವತ್ತು ಯಾರನ್ನು ಯಾರು ಬೇಕಾದರೂ, ವಿಶ್ವದ ಯಾವ ಮೂಲೆಯಲ್ಲಿದ್ದರೂ ದೂರವಾಣಿ, ಫ್ಯಾಕ್ಸ್, ಇ ಮೇಲ್ ಮುಖಾಂತರ ಕ್ಷಣಾರ್ಧದಲ್ಲಿ ಸಂಪರ್ಕಿಸಬಹುದು. ವೆಬ್ ಕ್ಯಾಮ್ ಮುಖಾಂತರ ಒಬ್ಬರನ್ನೊಬ್ಬರು ನೋಡಿಕೊಂಡು ಮಾತಾಡಬಹುದು. ಈ ತಂತ್ರಜ್ಞಾನದ ಬಳಕೆಯಿಂದ ನಮ್ಮ ವ್ಯಕ್ತಿತ್ವವನ್ನು ನಾವು ಇನ್ನಷ್ಟು ಉತ್ತಮ ಪಡಿಸಿಕೊಳ್ಳಬಹುದು.

ದೂರದ ಊರಿನಲ್ಲಿರುವ ನಿಮ್ಮ ನೆಂಟರ ಮಗನೋ ಮಗಳೋ ಉನ್ನತ ಪರೀಕ್ಷೆಯೊಂದರಲ್ಲಿ ತೇರ್ಗಡೆಯಾಗಿದ್ದಾರೆ ಎಂಬ ಸುದ್ದಿ ನಿಮಗೆ ಪರೋಕ್ಷವಾಗಿ ಗೊತ್ತಾಯಿತು ಅಂದಿಟ್ಟುಕೊಳ್ಳಿ. ಆಗ ಒಂದು ಇಮೇಲ್ ಹಾಕಿ ಶುಭ ಹಾರೈಸುವುದು ಸಜ್ಜನರ ಲಕ್ಷಣ. ಆದರೆ ಸಾಮಾನ್ಯವಾಗಿ ನಮ್ಮಲ್ಲಿ ಬಹಳ ಜನ ಸುದ್ದಿ ಸಿಕ್ಕಿದ ತಕ್ಷಣ, 'ನನಗೇನೂ ಅವನು ಸುದ್ದಿ ತಿಳಿಸಿಲ್ಲವಲ್ಲ, ನಾನೇಕೆ ಅಭಿನಂದನೆ ಸಲ್ಲಿಸಲಿ?' ಎಂದು ಮರುಪ್ರಶ್ನೆ ಹಾಕಿಕೊಳ್ಳುತ್ತಾರೆ. ಇದು ನಿಮ್ಮ ವ್ಯಕ್ತಿತ್ವದ ನೆಗೆಟಿವ್ ಅಂಶವನ್ನೇ ತೋರುತ್ತದೆ. ನಿಮ್ಮ ಒಂದು ಶುಭ ಸಂದೇಶದ ದೂರವಾಣಿ ಕರೆ ಬಂಧುತ್ವಕ್ಕೆ ಹೊಸ ಕಳೆ ಕೊಡಬಹುದು. ಬಂಧು ನಿಮ್ಮೂರಿನಲ್ಲೇ ಇದ್ದರೆ, ಒಂದಿಷ್ಟು ಸಿಹಿ ಮತ್ತು ಒಂದು ಸಣ್ಣ ಉಡುಗೊರೆಯೊಂದಿಗೆ ಅವರ ಮನೆಗೆ ಭೇಟಿ ಕೊಟ್ಟು ಸಂತೋಷ ಹಂಚಿಕೊಂಡು ಬರಬಹುದು.

ನಿಮ್ಮ ನೆಂಟರೋ, ಸ್ನೇಹಿತರೋ ಹೊಸ ಗೃಹಪ್ರವೇಶ ಮಾಡಿದ್ದಾರೆ. ನಿಮ್ಮ ಮನೆಗೇ ಬಂದು ಆಹ್ವಾನ ಪತ್ರಿಕೆ ಕೊಟ್ಟಿದ್ದಾರೆ. ಆದರೆ ನಿಮಗೆ ಹೋಗೋಕೆ ಆಗಲಿಲ್ಲ. ಈಗಿನ ಕಾಲದಲ್ಲಿ ಎಷ್ಟೇ ಸಂಚಾರ ವ್ಯವಸ್ಥೆ ಇದ್ದರೂ ದೂರಪ್ರಯಾಣ ಕಷ್ಟ. ಒಂದು ದೂರವಾಣಿ ಕರೆ ಅಥವಾ ಒಂದು ಇಮೇಲ್ ಸಂದೇಶ ಕಳುಹಿಸೋದು ಎಷ್ಟು ದೊಡ್ಡ ಕೆಲಸ? ಈ ರೀತಿ ಧನಾತ್ಮಕವಾಗಿ ಯೋಚಿಸುವುದರಿಂದ ನಿಮ್ಮ ವ್ಯಕ್ತಿತ್ವಕ್ಕೆ ದಕ್ಕುವ ಗೌರವ ಹೆಚ್ಚಾಗುತ್ತದೆ.

ಎಂಜಿನಿಯರಿಂಗ್ ಪಾಸಾಗಿರುವ ಹುಡುಗನಿಗೆ ಬರೀ ಎಸ್‌ಎಸ್‌ಎಲ್‌ಸಿ ಪಾಸಾದ ಹುಡುಗನ ಸಾಧನೆ ಅಷ್ಟೇನೂ ದೊಡ್ಡದು ಅಂತ ಅನಿಸದಿರಬಹುದು. ಎಸ್‌ಎಸ್‌ಎಲ್‌ಸಿ ಫೇಲಾದ ಹುಡುಗನ ಮಟ್ಟದಲ್ಲಿ ನಿಂತು ಯೋಚನೆ ಮಾಡಿದರೆ ಅದು ತುಂಬಾ ದೊಡ್ಡದೇ. ಅಂತಹ ಹುಡುಗನನ್ನು ಭೇಟಿ ಮಾಡಿ, ಕೈ ಹಿಡಿದು 'ಸಂತೋಷ ಕಣಪ್ಪ, ಮುಂದೆ ಚೆನ್ನಾಗಿ ಓದು' ಎಂದು ಹಾರೈಸಿದರೆ ಹುಡುಗನಿಗೂ ಹುಮ್ಮಸ್ಸು. ಮೊಬೈಲ್‌ನಲ್ಲಿ ಹಾರೈಸಿದರೂ ಅಷ್ಟೇ ಖುಷಿ.

ನಮ್ಮವರು ಯಾರೋ ಸೈಟ್ ಕೊಂಡಾಗ, ಮನೆ ಕಟ್ಟಿದಾಗ, ಮಕ್ಕಳು ವಿದೇಶಕ್ಕೆ ಹೊರಟಾಗ, ಮೊಮ್ಮಗು ಹುಟ್ಟಿದಾಗ– ಹೀಗೆ ಸಂತೋಷ ಹಂಚಿಕೊಳ್ಳಲು ನೂರೆಂಟು ಅವಕಾಶಗಳು ಸಿಗುತ್ತವೆ. 'ರಾಮಣ್ಣ ಹೇಳ್ದಾ– ನೀನು ಸೈಟ್ ತಗೊಂಡದ್ದು ತುಂಬಾ ಸಂತೋಷ ಆಯ್ತು ಕಣಪ್ಪಾ. ಬೇಗ ಮನೆ ಕಟ್ಟಿಸಿ ಊಟ ಹಾಕಿಸು' ಎಂದು ಗೆಳೆಯನಿಗೆ ಫೋನ್ ಮಾಡಿ ಹೇಳಿದರೆ ಅವನಿಗೆ ನಿಜಕ್ಕೂ ಮನಸ್ಸು ತುಂಬಿ ಬರುತ್ತದೆ. ನಿಮ್ಮ ಮೇಲಿನ ವಿಶ್ವಾಸ ಹೆಚ್ಚುತ್ತದೆ.

ಈ ಸಂದರ್ಭದಲ್ಲಿ ಒಂದು ಘಟನೆ ನೆನಪಾಗುತ್ತಿದೆ. ಬೇರೆ ಬೇರೆ ಬಡಾವಣೆಯಲ್ಲಿ ವಾಸವಿದ್ದ ಇಬ್ಬರು ನೆಂಟರು ಮಾರ್ಕೆಟ್‌ನಲ್ಲಿ ಒಮ್ಮೆ ಭೇಟಿಯಾದರು. 'ಈಗ ನಾವು ಮನೆ ಬದಲಾಯಿಸಿದ್ದೀವಿ, ಶ್ರೀನಿವಾಸ ನಗರಕ್ಕೆ ಬಂದಿದ್ದೀವಿ' ಎಂದು ಒಬ್ಬ ನೆಂಟ ಹೇಳಿದಾಗ ಇನ್ನೊಬ್ಬರಿಗೆ ಅಚ್ಚರಿ. 'ಹೌದಾ! ನಾವೂ ಅಲ್ಲೇ ಇದ್ದೀವಿ, ನಿಮ್ಮ ರಸ್ತೆ ಯಾವುದು?'

'ನಾವು ಮೂರನೆ ಮೈನ್ ನಾಲ್ಕನೇ ಕ್ರಾಸ್.'

'ಅಯ್ಯೋ, ನಾವೂ ಮೂರನೇ ಮೈನ್ ನಾಲ್ಕನೇ ಕ್ರಾಸೇ. ನಿಮ್ಮ ಮನೆ ನಂಬರ್?'

'ಮುನ್ನೂರಾ ನಾಲ್ಕು.'

'ಅಯ್ಯೋ.. ನಮ್ಮನೆ ಎದುರಿನದ್ದೇ!'

–ಅಂದರೆ ನೆಂಟರಿಬ್ಬರೂ ಎದುರು ಬದುರು ಮನೇಲಿದ್ದರೂ ಒಬ್ಬರನ್ನೊಬ್ಬರು ನೋಡದಷ್ಟು, ಮಾತಾಡದಷ್ಟು ಬ್ಯುಸಿ! ಇಮೇಲ್, ಫೋನ್ ಸಂಪರ್ಕ ಇಟ್ಟುಕೊಂಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ, ಅಲ್ವೆ?

ಅಥವಾ ಅವರು ಯಾವುದಾದರೂ ಕಾರಣಕ್ಕೆ ನಿರಂತರ ಸಂಪರ್ಕ ಇರಿಸಿಕೊಂಡಿದ್ದರೆ ಇಂಥಾ ಸಂದರ್ಭ ಬರುತ್ತಿರಲಿಲ್ಲ.

ಫೇಸ್‌ಬುಕ್ ಅಥವಾ ಟ್ವಿಟರ್ ಕೂಡಾ ಸಂಪರ್ಕಕ್ಕೆ ಅತ್ಯುತ್ತಮ ಮಾಧ್ಯಮ. ನಿಮ್ಮ ಸುದ್ದಿಯನ್ನು ಹಲವಾರು ಜನರಿಗೆ ಏಕಕಾಲದಲ್ಲಿ ಮುಟ್ಟಿಸಲು ಬಹಳ ಉಪಯೋಗದ್ದು. ಆದರೆ ಅನೇಕ ಸಂದರ್ಭಗಳಲ್ಲಿ ವೈಯಕ್ತಿಕ ಸಂದೇಶಗಳಷ್ಟು ಆತ್ಮೀಯತೆ, ಪ್ರೀತಿ, ಅಕ್ಕರೆ ಈ ಸಂದೇಶಗಳಿಂದ ಬರೋದಿಲ್ಲ. ಈಗ ಮೊಬೈಲ್‌ಗಳಲ್ಲೇ ಇಮೇಲ್ ಚಾಟಿಂಗ್ ಇದೆ. ಯುವಜನರು ಧಾರಾಳವಾಗಿ ಉಪಯೋಗ ಮಾಡುತ್ತಿದ್ದಾರೆ. ಚಾಟಿಂಗ್‌ಗಳು ಕೇವಲ ಸಮಯವನ್ನು ಕೊಲ್ಲಲು, ಮನರಂಜನೆಗೆ ಅಲ್ಲ; ಅಂತಹ ಚಾಟಿಂಗ್‌ಗಳಿಂದ ನಮ್ಮ ವ್ಯಕ್ತಿತ್ವ ಬೆಳೆಯಬೇಕು. 'ಆ ಗೋಪಿ ಪರವಾಗಿಲ್ಲ ಕಣಯ್ಯ, ಯಾರ ಮನೆಯ ವಿಚಾರವೇ ಆಗಲಿ, ಏನಾದರೂ ಒಳ್ಳೇ ಸುದ್ದಿ ಕಿವಿಗೆ ಬಿದ್ದರೆ ಸಾಕು ತಕ್ಷಣ ಫೋನ್ ಮಾಡ್ತಾನೆ, ಮೆಸೇಜ್ ಮಾಡ್ತಾನೆ' ಎಂದು ಗೆಳೆಯರು ನಿಮ್ಮ ಬಗ್ಗೆ ಹೇಳಿದರೆ ಎಷ್ಟು ಖುಷಿಯ ಸಂಗತಿ ಅಲ್ವಾ!

ಇತ್ತೀಚೆಗೆ ನಾವು ಪರಸ್ಪರ ಸುಖ ದುಃಖಗಳನ್ನು ಹಂಚಿಕೊಳ್ಳೋದನ್ನೇ ಮರೆತು ಬಿಡುತ್ತಿದ್ದೇವೆ. ಒಂದು ಮನೆಯಲ್ಲಿ ಹೊಸ ಮಗು ಬಂದರೆ, ಹಿರಿಯರೊಬ್ಬರು ಅರವತ್ತು ವರ್ಷದ ಶಾಂತಿಯನ್ನು ಆಚರಿಸಿಕೊಂಡರೆ, ಒಂದು ಜೀವ ಹೊರಟು ಹೋದರೆ, ಯಾರಿಗೋ ಅಪಘಾತವಾಗಿ ದಿನಗಳನ್ನು ಎಣಿಸುತ್ತಿದ್ದರೆ, ಹೋಗೋಕೆ ಪುರುಸೊತ್ತೇ ಆಗಲ್ಲ. 'ವೀಕೆಂಡಲ್ಲಿ ಹೋಗೋಣ' ಎನ್ನುವುದು ಮಾಮೂಲು ಅನ್ನಿಸಿಕೆ. ಅದು ಸರಿ, ಆದರೆ ಅದಕ್ಕೂ ಮುನ್ನ ಸುದ್ದಿ ಗೊತ್ತಾದ ತಕ್ಷಣ ಒಂದು ಫೋನ್ ಮಾಡಿದರೆ ಒಳ್ಳೆಯದಲ್ವೆ?

ಮನುಷ್ಯ ಸಂಬಂಧಗಳನ್ನು ರೂಪಿಸುವುದೆಂದರೆ ಹದಕ್ಕೆ ಮಣ್ಣು ಕಲಸಿ ಜತನದಿಂದ ಮಣ್ಣಿನ ಮಡಕೆಯನ್ನು ರೂಪಿಸಿದ ಹಾಗೆ. ಸಣ್ಣದೊಂದು ತಪ್ಪು ಕೂಡಾ ಸಂಬಂಧಗಳನ್ನು ಹದಗೆಡಿಸುತ್ತದೆ. ನಮ್ಮ ನಡವಳಿಕೆಗಳಿಂದ ನಮ್ಮ ವ್ಯಕ್ತಿತ್ವವನ್ನು ನಾವೇ ಎತ್ತರಕ್ಕೆ ಕೊಂಡೊಯ್ಯುವ ಅವಕಾಶ ನಮಗೆ ಜೀವನದಲ್ಲಿ ಹೇರಳವಾಗಿ ದೊರೆಯುತ್ತದೆ. 'ಕಾಸಿಲ್ಲ, ಕರಿಮಣಿಯಿಲ್ಲ. ಒಂದ್ನಾಲ್ಕು ಒಳ್ಳೇ ಮಾತಾಡೋಕೆ ಏನು ಕಳ್ಕೊಬೇಕು..' ಹೇಳಿ!

ಈಗ ಎಲ್ಲರೂ ಬ್ಯುಸಿ ಎನ್ನುವುದು ನಿಜ. ನಮಗೆ ಇರುವಂತೆ ಎಲ್ಲರಿಗೂ ದಿನಕ್ಕೆ 24 ಗಂಟೆಯೇ ಇರೋದು. ಅದರಲ್ಲೇ ಎಲ್ಲವೂ ಆಗಬೇಕು. ಇದಕ್ಕೆ ಮುಖ್ಯವಾಗಿ ಬೇಕಾಗಿರೋದು ಮನಸ್ಸು. ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು. ಬೆರಳ ತುದಿಯಲ್ಲಿರುವ ತಂತ್ರಜ್ಞಾನವನ್ನು ಸುಲಭದಲ್ಲಿ ಬಳಸಿ ಇಂತಹ ಸನ್ನಡತೆಯ ಮೂಲಕ ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಹೆಚ್ಚು ಕಷ್ಟವೇನಲ್ಲ.